೧) ಮಾರ್ಗಗಳ ಪ್ರೋಜಣಿ ವರದಿಯಂನ್ನು ಕರೆಯುವುದು.

೨) ಮಾರ್ಗಗಳು ಮೋಟಾರು ಸಂಚಾರಕ್ಕೆ ಯೋಗ್ಯವೇ ಎಂಬುದರ ಬಗ್ಗೆ ಕಾರ್ಯಾಂಗ ಅಭ್ಯಂತರರಿಂದ ವರದಿಗಳು.

೩) ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಪ್ರಕಟಣೆ.

೪) ಅಧಿಸೂಚನೆಯ ಪ್ರಕಟಣೆಯಂ ನಂತರ ಆಹವಾಲುಗಳನ್ನ ಸ್ವೀಕರಿಸಲು ೩೦ ದಿನಗಳ ಕಾಲಾವಕಾಶ.

ಶ್ರೀ ಜಿ. ಎಸ್. ಆಚಾರ್.—ಈ ಪ್ರಶ್ನೆಯನ್ನು ಕಳುಹಿಸಿದ ನಂತರ ಕೆಲವು ವರದಿಗಳು ಬಂದಿದೆ. ನನಗೆ ತಿಳಿದ ಪ್ರಕಾರ ಇತ್ತೀಚೆಗೆ ಆರ್.ಟಿ.ಓ. ಅವರು ಪರ್ಮಿಟ್ ಕೊಡುವಾಗ ನಿರುದ್ಯೋಗಿಗಳಿಗೆ ಕೊಡುವುದನ್ನು ತಿರಸ್ಕಾರ ಮಾಡುತ್ತಿದ್ದಾರೆ. ಸಂಚಾರ ಒತ್ತಡ ಇರುವ ಘಟ್ಟಪ್ರದೇಶಗಳಲ್ಲಿ ಪಟ್ಟಭದ್ರಹಿತಾಸಕ್ತಿಗಳ ಇಚ್ಛೆಗನುಗುಣವಾಗಿ ಹೊಸ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಆ ರೀತಿ ಮಾಡುತ್ತಿದ್ದರೆ ಅದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆ. ಜಿ. ಆರ್. ಸಿದ್ಧಯ್ಯ.—ಪರ್ಮಿಟ್‌ಗಳನ್ನು ಕೊಡುವಾಗ ಎಲ್ಲಾ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಆಕಸ್ಮಾತ್ ನಿಯಮಗಳನ್ನು ಅನುಸರಿಸದೆ ಇದ್ದರೆ ಅದರ ಬಗ್ಗೆ ಆರೋಪಗಳು ನನ್ನ ಮೇಲೆ, ಸರ್ಕಾರದ ಮೇಲೆ ಬರತಕ್ಕದ್ದು ಇದೆ, ನಿಯಮಗಳನ್ನು ಬಿಟ್ಟು ಯಾವುದೇ ಪರ್ಮಿಟ್‌ಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಟ್ರಾಫಿಕ್‌ಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ, ಅದರ ಬಗ್ಗೆ ನನ್ನ ಕಛೇರಿಯಲ್ಲಿ ಬಂದು ಹೇಳಿದರೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

## ಪೊನ್ನಂಪೇಟೆಯಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆ.

೬೯೦. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ತಾಲ್ಲೂಕಿನ ಪೊನ್ನಂಪೇಟೆಯಲ್ಲಿರುವ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಕಾಲೇಜಿನಲ್ಲಿ ಯಾವ ಯಾವ ಶಾಖೆಗಳು ಹಾಗೂ ಯಾವ ವಿಷಯಗಳು ಇವೆ ?

ಆ) ಯಾವ ಯಾವ ವಿಷಯಗಳಲ್ಲಿ ಎಷ್ಟೆಷ್ಟು ಮಹಿಳೆಯರು ಕಲಿಯುತ್ತಿದ್ದಾರೆ ?

ಇ) ಯಾವ ಯಾವ ವಿಷಯಗಳಲ್ಲಿ ಎಷ್ಟೆಷ್ಟು ಅರ್ಹತಾ ಉಪನ್ಯಾಸಕರಿದ್ದಾರೆ ?

ಈ) ಕಾಲೇಜಿಗೆ ಸರಿಯಾದ ಕಟ್ಟಡ ಮತ್ತು ಕಾರ್ಯಗಾರ ಇದೆಯೆ ?

ಉ) ಈ ಕಾಲೇಜಿನಲ್ಲಿ ಕಳೆದ ಸಾರಿ ಎಲ್ಲಾ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಊ) ಬೆಳಗಾಂ, ಗುಲ್ಬರ್ಗ ಹಾಗೂ ಶಿವಮೊಗ್ಗಗಳಲ್ಲಿರುವ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಕಾಲೇಜುಗಳು ಯಾವ ಸ್ಥಿತಿಯಲ್ಲಿವೆ ?

ಋ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

ಅ) ಪೊನ್ನಂಪೇಟೆ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಈ ಕೆಳಗಿನ ನಾಲ್ಕು (೪) ವೃತ್ತಿಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆ.

೧) ಸೆಕ್ರೆಟೇರಿಯಲ್ ಪ್ರಾಕ್ಟೀಸ್

೨) ಮೆಕ್ಯಾನಿಕ್ ರೇಡಿಯೋ ಮತ್ತು ಟಿ.ವಿ.

೩) ಮೆಕ್ಯಾನಿಕ್ ಜನರಲ್ ಎಲೆಕ್ಟ್ರಾನಿಕ್ಸ್.

೪) ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್.

ಆ) ೧) ಸೆಕ್ರೆಟೇರಿಯಂಲ್ ಪ್ರಾಕ್ಟೀಸ್ ೧೬

೨) ಮೆಕ್ಯಾನಿಕ್ ರೇಡಿಯೋ ಮಂತ್ತು ಟೆಲಿವಿಷನ್

ಜ್ಯೂನಿಯರ್ — ೧೭

ಸೀನಿಯರ್ — ೧೪ ೩೧

೩) ಜನರಲ್ ಎಲೆಕ್ಟ್ರಾನಿಕ್ಸ್

ಜ್ಯೂನಿಯರ್ — ೧೮

ಸೀನಿಯರ್ — ೧೮ ೩೬

೪) ಇನ್ಸ್‌ಟ್ರುಮೆಂಟ್ ಮೆಕ್ಯಾನಿಕ್

ಜ್ಯೂನಿಯರ್ — ೧೭

ಸೀನಿಯರ್ — ೧೮ ೩೫

ಇ)

| | ವೃತ್ತಿ | ಸಂಖ್ಯೆ | |
|---|---|---|---|
| ೧) | ಯಂತ್ರಗಾರ | ೧ | |
| ೨. | ಲೇಖಾ ವಿಭಾಗ | ೧ | |
| ೩. | ಎಲೆಕ್ಟ್ರಾನಿಕ್ಸ್ | ೧ | |
| ೪. | ಸೆಕ್ರೆಟೇರಿಯಲ್ ಪ್ರಾಕ್ಟೀಸ್ | ೧ | |
| ೫. | ಇನ್ಸ್‌ಟ್ರುಮೆಂಟ್ ಎಲೆಕ್ಟ್ರಾನಿಕ್ಸ್ | ೨ | ಗುತ್ತಿಗೆ ಮೇರೆಗೆ |
| ೬. | ಲೆಕ್ಕ ವಿಭಾಗ | ೧ | ನೇಮಕ ಮಾಡಲಾಗಿದೆ. |
| ೭. | ಇನ್ಸ್‌ಟ್ರುಮೆಂಟ್ ಮೆಕ್ಯಾನಿಕ್ ಫಿಟ್ಟರ್ | ೧ | |

ಈ) ಖಾಸಗೀ ಕಟ್ಟಡದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಕಾರ್ಯಗಾರದ ವ್ಯವಸ್ಥೆ ಮಾಡಲಾಗಿದೆ. ಸರಕಾರಿ ಕಟ್ಟಡದ ಸಲುವಾಗಿ ವಿನೇಶನಕ್ಕಾಗಿ ಪ್ರಯತ್ನ ಮಾಡಿದೆ.

ಉ) ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೂರು ವೃತ್ತಿಗಳು ಎರಡೂ ವರ್ಷದ ಅವಧಿಯದಾಗಿರುತ್ತದೆ. ಒಂದು ವೃತ್ತಿ ಅಂದರೆ ಸೆಕ್ರೆಟೇರಿಯಲ್ ಪ್ರಾಕ್ಟೀಸ್ ೧ ವರ್ಷದ ಅವಧಿಯದಾಗಿರುತ್ತದೆ. ಆ ವೃತ್ತಿಯಲ್ಲಿ ೧೬ ಅಭ್ಯರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಅವರೂ ಸಮಾಜ ಪರಿಚಯದ ವಿಷಯದಲ್ಲಿ ಉತ್ತೀರ್ಣರಾಗಿದ್ದಾರೆ. ಉಳಿದ ವಿಷಯಗಳ ಪರೀಕ್ಷೆಗೆ ಹೆಚ್ಚಿನ ವಿದ್ಯಾರ್ಥಿಗಳು ಹಾಜರಾಗಿಲ್ಲದ ಕಾರಣ ಅವರು ಉತ್ತೀರ್ಣರಾಗಿಲ್ಲ.

೨)ಎರಡೂ ವರ್ಷದ ಅವಧಿಯದಾಗಿರುವ ಉಳಿದ ಮೂರು ವೃತ್ತಿಗಳ ಮೊದಲನೇ ವರ್ಷದಲ್ಲಿ ಸಮಾಜ ಪರಿಚಯದಲ್ಲಿ ಒಂದೇ ವಿಷಯಕ್ಕೆ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿರುತ್ತದೆ. ಅದರಂತೆ ಎಲ್ಲಾ ವಿದ್ಯಾರ್ಥಿಗಳು ಸಮಾಜ ಪರಿಚಯದ ವಿಷಯದಲ್ಲಿ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿದ್ದಾರೆ.

ಊ) ಸರಿಯಾದ ಸ್ಥಳ ಮತ್ತು ಕಟ್ಟಡದ ಅಭಾವ ಮತ್ತು ಹೊಸ ವಿಷಯಗಳಾದ ರೇಡಿಯೋ ಮತ್ತು ಟಿ.ವಿ. ಮತ್ತು ಎಲೆಕ್ಟ್ರಾನಿಕ್ಸ್ ವಗೈರೆ ವಿಷಯಗಳಲ್ಲಿ ಬೋಧಕರ ಕೊರತೆಗಳಿದ್ದವು. ಆದರೂ ಈ ಕೊರತೆಯನ್ನು ಆದಷ್ಟು ನಿವಾರಿಸಲು ಸೂಕ್ತ ಕ್ರಮಗಳನ್ನು ಬೋಧಕರ ನೇಮಕಾತಿ ಮಾಡುವುದರ ಮೂಲಕ ಕೈಗೊಂಡಿದೆ.

ಋ) ಬೆಳಗಾಂ, ಗುಲ್ಬರ್ಗ ಹಾಗೂ ಶಿವಮೊಗ್ಗಗಳಲ್ಲಿ ಸ್ಥಳ ಮತ್ತು ಕಟ್ಟಡಗಳ ಅಭಾವ ಇಲ್ಲ. ಅಲ್ಲಿ ಬೋಧಕರ ಕೊರತೆ ಇದೆ. ಆದರೆ ಅಲ್ಲಿ ಸ್ಥಳೀಯ ಜನರ ಸಹಕಾರದಿಂದ ಅವು ಸ್ವಲ್ಪ ಮಟ್ಟಿಗೆ ನಿವಾರಣೆಯಾಗಿ ಅಲ್ಲಿನ ವಿದ್ಯಾರ್ಥಿಗಳಿಗೆ ತರಬೇತಿ ದೊರೆಯುತ್ತಿದೆ ಈಗ ಅಲ್ಲಿಗೆ ಬೋಧಕರನ್ನು ನೇಮಿಸಲು ತಕ್ಕ ಕ್ರಮಗಳನ್ನು ಕೈಗೊಂಡಿದೆ.

ಋ) ಸಂಸ್ಥೆಗಳ ಅಭಿವೃದ್ಧಿಗೆ ಸಾಕಷ್ಟು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಶ್ರೀಮತಿ ಸುಮ ವಸಂತ.**—ಮಾನ್ಯ ಅಧ್ಯಕ್ಷರೆ, ನಾನು ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಆ ಸ್ಥಳಕ್ಕೆ ಭೇಟಿ ಇತ್ತಿದ್ದೇನೆ. ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಅಲ್ಲಿ ಬಿಲ್ಡಿಂಗ್ ಇದೆಯೆಂದು ಹೇಳಿದ್ದಾರೆ. ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈ ಗೋದಾಮಿನಲ್ಲಿ ಆ ಶಾಲೆ ಪ್ರಾರಂಭವಾಗಿದೆ. ನಮ್ಮ ಜಿಲ್ಲಾಮಂತ್ರಿಗಳಿಗೂ ವಿಚಾರ ಗೊತ್ತಿದೆ. ಪೊನ್ನಂಪೇಟೆಯ ಕೆ.ಎಫ್.ಸಿ.ಎಸ್. ಗೋದಾಮಿನ ಒಂದು ರೂಮನ್ನು ಬಾಡಿಗೆಗೆ ತೆಗೆದುಕೊಂಡಂ ಸೆಕ್ರೆಟರಿಯಲ್ ಪ್ರಾಕ್ಟೀಸ್ ಕೋರ್ಸ್ ನಡೆಯುತ್ತಿದೆ. ಅದಕ್ಕೆ ವಿದ್ಯುಚ್ಛಕ್ತಿ, ವಾಟರ್ ಫೆಸಿಲಿಟಿಸ್ ಇಲ್ಲ. ಎಲ್ಲಾ ಅನುಕೂಲಗಳನ್ನು ಕೊಡುವುದರ ಜೊತೆಗೆ ಕಟ್ಟಡವನ್ನು ಯಾವಾಗ ಕೊಡುತ್ತೀರಿ ಎಂದು ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಡಿ. ಮಂಜುನಾಥ್.**—ಮಾನ್ಯ ಅಧ್ಯಕ್ಷರೇ ಈಗ ಪೊನ್ನಂಪೇಟೆಯಲ್ಲಿ ನಡೆಯುತ್ತಿರುವ ಕೈಗಾರಿಕಾ ತರಬೇತಿ ಸಂಸ್ಥೆ ಒಂದಂ ಬಾಡಿಗೆ ಕಟ್ಟಡದಲ್ಲಿ ಎರಡು ವರ್ಷಗಳ ಹಿಂದೆ ಪ್ರಾರಂಭವಾಯಿತು. ಕಟ್ಟಡವನ್ನು ಕಟ್ಟಲಿಕ್ಕೆ ಸೈಟನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳನ್ನು ಕೇಳಿದ್ದೇವೆ. ಸೈಟನ್ನು ಕೊಟ್ಟರೆ ನಾವು ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

**ಶ್ರೀಮತಿ ಸುಮ ವಸಂತ.**—ಅಲ್ಲಿ ಸರಿಯಾದ ರೀತಿಯಲ್ಲಿ ಪಾಠಪ್ರವಚನಗಳು ನಡೆಯದೇ ಇದ್ದುದರಿಂದ ಪರೀಕ್ಷೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಕ್ವಾಲಿಫೈಡ್ ಇನ್‌ಸ್ಟ್ರಕ್ಟರ್ ಇಲ್ಲದೆ, ಸರಿಯಾಗಿ ಪಾಠಪ್ರವಚನಗಳು ಆಗದೇ, ಪರೀಕ್ಷೆಗೆ ಕಂಳಿತುಕೊಳ್ಳುವುದಕ್ಕೆ ಆಗದೇ ಇರುವಂತಹ ಎಲ್ಲಾ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಅಲ್ಲಿಗೆ ಕ್ವಾಲಿಫೈಡ್ ಇನ್‌ಸ್ಟ್ರಕ್ಟರ್‌ನ್ನು ಯಾವಾಗ ಪೋಸ್ಟ್ ಮಾಡುತ್ತೀರಿ?

**ಶ್ರೀ ಡಿ. ಮಂಜುನಾಥ್.**—ಕಳೆದ ವರ್ಷ ಸೂಕ್ತ ಅಭ್ಯರ್ಥಿಗಳು ಸಿಗಲಿಲ್ಲ, ಗಂತ್ತಿಗೆ ಆಧ್ಯಾರದ ಮೇಲೆ ನೇಮಂಕ ಮಾಡಿದ್ದೇವೆ. ಈಗ ಮಡಕೇರಿಯಲ್ಲಿರುವವರನ್ನು ಪೊನ್ನಂಪೇಟೆಗೆ ಡೆಪ್ಯುಟ್ ಮಾಡಲಿಕ್ಕೆ ಹೇಳಿದ್ದೇವೆ.

**ಶ್ರೀ ಎಸ್. ಬಂಗಾರಪ್ಪ.**—ಒಂದು ವರ್ಷ ಪಾಠಪ್ರವಚನಗಳು ಏನು ನಡೆಯಬೇಕಾಗಿತ್ತು ಅದಂ ನಡೆದಿಲ್ಲ. ನಿಮಗೆ ಕ್ವಾಲಿಫೈಡ್ ಇನ್‌ಸ್ಟ್ರಕ್ಟರ್ ಸಿಗದಿರಬಹುದು, ಅಧ್ಯಾಪಕರು ಸಿಗದಿರಬಹುದು. ಅದು ಸರ್ಕಾರದ ಜವಾಬ್ದಾರಿ. ಒಂದು ವರ್ಷದ ಪಾಠವನ್ನು ಒಂದು ತಿಂಗಳಿನಲ್ಲಿ ಸ್ಪೆಷಲ್‌ಕ್ಲಾಸ್ ತೆಗೆದಂ ಕೊಂಡು ಮುಗಿಸಿದರೆ ಎಲ್ಲವನ್ನು ಸ್ಟಡಿ ಮಾಡುವುದಕ್ಕೆ ವಿದ್ಯಾರ್ಥಿಗಳಿಗೆ ಆಗಿಲ್ಲ. ಈಗ ಎಲ್ಲರೂ ಫೇಲಾಗಿದ್ದಾರೆ. ಇದು ಇಲಾಖೆಯವರ ತಪ್ಪಿನಿಂದ ಆಗಿರತಕ್ಕ ಕೆಲಸ. ಆದ್ದರಿಂದ ವಿದ್ಯಾರ್ಥಿಗಳು ಓದದೆ ಇದ್ದರೂ ಅವರನ್ನು ಪಾಸ್ ಮಾಡಿಸುತ್ತೀರಾ? ಪಾಠ ಹೇಳುವುದಕ್ಕೆ ಮಾಸ್ಟರ್‌ಗಳು ಇಲ್ಲ. ಈಗ ಎಲ್ಲರನ್ನು ಪಾಸ್ ಮಾಡಿಸುತ್ತೀರಾ? ಅವರಿಗೆ ಯಾವ ಸೌಲಭ್ಯವನ್ನು ಕೊಡುತ್ತೀರಿ? ಅವರಿಗೆ ಸರ್ಟಿಫಿಕೇಟ್‌ಗಳನ್ನಾದರೂ ಕೊಡುತ್ತೀರಾ?

**ಶ್ರೀ ಡಿ. ಮಂಜುನಾಥ್.**—ಕೆಲವು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿಲ್ಲ. ಅಲ್ಲಿ ಒಂದು ವರ್ಷದ ಕೋರ್ಸ್, ಎರಡು ವರ್ಷದ ಕೋರ್ಸ್‌ಗಳಿವೆ. ಇನ್ನು ಪರೀಕ್ಷೆಗಳನ್ನು ಮಾಡಂವುದು ಇದೆ. ಯಾವುದೇ ತೊಂದರೆಯಾಗಿಲ್ಲ. ಕೆಲವರು ಪರೀಕ್ಷೆಯನ್ನು ತೆಗೆದುಕೊಳ್ಳಲಿಲ್ಲ ಆದ್ದರಿಂದ ಅವರು ಫೇಲಾಗಿದ್ದಾರೆ.

**ಶ್ರೀ ಕೆ.ಜೆ. ಜಾರ್ಜ್.**—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ, ಬೆಳಗಾಂ ಹಾಗೂ ಗುಲ್ಬರ್ಗಗಳಲ್ಲಿ ಕಟ್ಟಡಗಳನ್ನು ಒದಗಿಸಿದ್ದೀರಿ ಇನ್‌ಸ್ಟ್ರಕ್ಟರ್‌ಗಳು ಪೊನ್ನಂಪೇಟೆಗೆ ಸಿಗುವುದಿಲ್ಲವೆ? ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗೆ ಆದಷ್ಟು ಬೇಗ ನಿವೇಶನವನ್ನು ಪಡೆದುಕೊಂಡು ಕಟ್ಟಡವನ್ನು ಒದಗಿಸಿ, ಬೈಲಾದಕರನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ. ಮಂಜುನಾಥ್.**—ನಿವೇಶನಗಳನ್ನು ಕೇಳುತ್ತಿದ್ದೇವೆ. ನಿವೇಶನ ದೊರೆತ ತಕ್ಷಣ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

**ಶ್ರೀ ಪಿ. ಜಿ.ಆರ್. ಸಿಂಧ್ಯ.**—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರವೇಳೆ ಮುಗಿಯದಿದ್ದರೆ ಮಾನ್ಯ ಯಂಡಿಯೂರಪ್ಪನವರ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ.

ಅಧ್ಯಕ್ಷರು.—ಈಗ ತಡೆಹಿಡಿಯಲಾದ ಪ್ರಶ್ನೆ, ಮಾನ್ಯಸದಸ್ಯರಾದ ಎಸ್. ಕೆ. ಕಾಂತರವರು ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಶಾಣಪ್ಪ.— ಮಾನ್ಯ ಸದಸ್ಯರಾದ ಎಸ್. ಕೆ. ಕಾಂತರವರು ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶಾಣಪ್ಪನವರು ಇಲ್ಲದಿದ್ದರೆ ಅಧ್ಯಕ್ಷರು ತಾವೇ ಪ್ರಶ್ನೆ ಕೇಳಬಹುದು.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಮುಗಿದ ಮೇಲೆ ನಾನು ಪ್ರಶ್ನೆ ಕೇಳಲಿಕ್ಕೆ ಅಧಿಕಾರ ಇಲ್ಲ. ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಆದರೂ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯಸದಸ್ಯರಾದ ಕಾಂತರವರ ಹೆಸರಿನಲ್ಲಿರುವ ಪ್ರಶ್ನೆಯನ್ನು ಕೇಳುತ್ತೇನೆ.

## ಹುಬ್ಬಳ್ಳಿ ಮತ್ತು ಗುಲ್ಬರ್ಗದ ಕಾರ್ಮಿಕ ನ್ಯಾಯಾಲಯಗಳ ಬಗ್ಗೆ

೨೬೩. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮತ್ತು ಗುಲ್ಬರ್ಗಾದ ಕಾರ್ಮಿಕ ನ್ಯಾಯಾಲಯದಲ್ಲಿ ಅತಿ ಹೆಚ್ಚಿನ ಕೆಲಸದ ಕೊರತೆಯಿಂದಾಗಿ ಪೂರ್ತಿಯಾಗಿ ತೀರ್ಮಾನವಾಗದೆ ಇರುವ ಪ್ರಕರಣಗಳೆಷ್ಟು? ಹಾಗೂ ಈಗಾಗಲೇ ತೀರ್ಮಾನವಾಗಿರುವ ಪ್ರಕರಣಗಳೆಷ್ಟು ಹಾಗೂ ತೀರ್ಮಾನವಾಗಲು ತೆಗೆದುಕೊಂಡ ಕಾಲಾವಧಿ ಎಷ್ಟು?

ಆ) ಸದರಿ ಪ್ರಕರಣಗಳು ತೀರ್ಮಾನವಾಗದೆ ಇಂದರೆ, ಒಂದು, ಎರಡು, ಮೂರು, ನಾಲ್ಕು ಹಾಗೂ ಐದು ವರ್ಷಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡುವುದು.

ಇ) ಸದರಿ ವಿಳಂಬಕ್ಕೆ ಕಾರಣಗಳೇನು? ಹಾಗೂ ಅದನ್ನು ತ್ವರಿತಗೊಳಿಸಲು ಕೈಕೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

| ಅ) ಹುಬ್ಬಳ್ಳಿ ಮತ್ತು ಗುಲ್ಬರ್ಗಾದ ಕಾರ್ಮಿಕ ನ್ಯಾಯಾಲಯಗಳಲ್ಲಿ ಪೂರ್ತಿಯಾಗಿ ತೀರ್ಮಾನವಾಗದೆ ಇರುವ ಪ್ರಕರಣಗಳ ಒಟ್ಟು ಸಂಖ್ಯೆ | ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿ<br>೬೭೧ | ಕಾರ್ಮಿಕ ನ್ಯಾಯಾಲಯ ಗುಲ್ಬರ್ಗ<br>೨೩೩ |
|---|---|---|
| ಈಗಾಗಲೇ ತೀರ್ಮಾನವಾಗಿರುವ ಪ್ರಕರಣಗಳು ಹಾಗೂ ತೀರ್ಮಾನವಾಗಲು ತೆಗೆದುಕೊಂಡ ಕಾಲಾವಧಿ | ೪೦೫<br>ಸಾಮಾನ್ಯವಾಗಿ ಪ್ರತಿಯೊಂದು ಪ್ರಕರಣ ತೆಗೆದುಕೊಂಡ ಕಾಲಾವಧಿ ಒಂದರಿಂದ ಎರಡು ವರ್ಷಗಳು. | ೪೬ |